ಅ) *ಸದರಿ ನಗರದ ಪಕ್ಕದಲ್ಲಿ ತುಂಗಾ ನದಿ ಇರುವುದರಿಂದ ಈಜುಕೊಳವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?*

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಕ್ರೀಡಾಂಗಣ ನಿರ್ವಹಣೆಗಾಗಿ ರೂ. 1.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಆ) ಈ ಕುರಿತು ಪರಿಶೀಲಿಸಲಾಗುತ್ತಿದೆ.

ಶಿವಮೊಗ್ಗ ನಗರದ ದೇವಿ ಷುಗರ್ಸ್ ಕಾರ್ಖಾನೆಯ ಪುನರ್ ಸ್ಥಾಪನೆ

3109 - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿವಮೊಗ್ಗ ದೇವಿ ಷುಗರ್ಸ್ ಪುನರ್ ಸ್ಥಾಪನೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?*

ಆ) *ಈ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವ ಜಮೀನು ಸರ್ಕಾರದ ವಶದಲ್ಲಿದೆಯೇ?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಯು 1996-97 ರಿಂದ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು ಇದನ್ನು ಪುನರಾಂಭಿಸುವ ಬಗ್ಗೆ ಸರ್ಕಾರ ದೀರ್ಘ ಚಿಂತನೆಯನ್ನು ನಡೆಸಿ 1998ರಲ್ಲಿ ದಿ ತುಂಗಭದ್ರಾ ಶುಗರ್ಸ್ (ದೇವಿ ಸುಗರ್ಸ್ ಲಿ). ಆಕ್ವಿಜಿಷನ್ ಅಂಡ್ ಟ್ರಾನ್ಸ್ಫರ್ ಆಫ್ ಅಂಡರ್‌ಟೇಕಿಂಗ್ ಅರ್ಡಿನನ್ಸ್ 1998ರ ಸುಗ್ರಿವಾಜ್ಞೆಯನ್ನು ದಿನಾಂಕ 29-6-98ರಲ್ಲಿ ಹೊರಡಿಸಿ ನಂತರ, ದಿನಾಂಕ 22-2-98ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಅನುಷ್ಠಾನಕ್ಕೆ ಬಂದಿರುವುದಿಲ್ಲ.

ತುಂಗಭದ್ರಾ ಸಕ್ಕರೆ ಕಾರ್ಖಾನೆಯಿಂದ ಬರಬೇಕಾದ ಬಾಕಿಗಾಗಿ ಮದ್ರಾಸ್ ಮೂಲದವರು ಮದ್ರಾಸ್ ಹೈ ಕೋರ್ಟ್‌ನಲ್ಲಿ ದಾವೆ ಹೂಡಿದ್ದರಿಂದ ಮದ್ರಾಸ್ ಹೈ ಕೋರ್ಟ್ ದಿನಾಂಕ 16-4-99ರಲ್ಲಿ ತುಂಗಭದ್ರಾ ಸಕ್ಕರೆ ಕಾರ್ಖಾನೆಯನ್ನು ಸಂಪೂರ್ಣವಾಗಿ ಸಮಾಪನಾಗೊಳಿಸಲು ಹಾಗೂ ಇದರ ಸಮಸ್ತ ವಹಿವಾಟನ್ನು ಮದ್ರಾಸ್ ಹೈಕೋರ್ಟಿನಿಂದ ನೇಮಕವಾದ ಅಫಿಷೀಯರ್ ಲಿಕ್ವಿಡೇಟರ್‌ರವರ ವಶಕ್ಕೆ ನೀಡುವ ಬಗ್ಗೆ ಆದೇಶ ಹೊರಡಿಸಿದ್ದರ ಮೇರೆಗೆ ಅಫಿಷೀಯರ್ ಲಿಕ್ವಿಡೇಟರ್ ಮದ್ರಾಸ್ ಹೈಕೋರ್ಟ ಇವರು ದಿ. 28-9-99ರಂದು ಸದರಿ ಕಾರ್ಖಾನೆಯನ್ನು ತಮ್ಮ ವಶಕ್ಕೆ ಪಡೆದು ಬೀಗಮುದ್ರೆ ಮಾಡಿರುತ್ತಾರೆ. ಈ ಸಂಬಂಧ 2 ಕೇಸುಗಳು ಮದ್ರಾಸ್ ಹೈಕೋರ್ಟಿನಲ್ಲಿ ದಾಖಲಾಗಿದ್ದು, ಕೇಸುಗಳು ವಿಚಾರಣಾ ಹಂತದಲ್ಲಿರುತ್ತವೆ.

ಆ) ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದಂತೆ ಒಟ್ಟು 3,715-29 ಎಕರೆ ಜಮೀನು ಇರುತ್ತದೆ. ಇದರಲ್ಲಿ 2212-18 ಎಕರೆ ಜಮೀನು ಕಂಪನಿಯು ಖರೀದಿಸಿದ್ದು, ಉಳಿದ 1503-11 ಎಕರೆ ಜಮೀನು ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ಪಡೆದಿವೆ. ಕರ್ನಾಟಕ ಭೂ ಸುಧಾರಣಾ

ಕಾಯ್ದೆ 1961 ಜಾರಿಗೆ ಬಂದ ನಂತರ ಶಿವಮೊಗ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ನೋಟಿಫಿಕೇಷನ್ ನಂ. ಎಲ್‌ಆರ್‌ಎಫ್:ಸಿಆರ್:150: 79-80 ದಿನಾಂಕ: 21-10-91ರಲ್ಲಿ ಕಾರ್ಖಾನೆಯ 3715-29 ಎಕರೆ ಜಮೀನಿನಲ್ಲಿ 50 ಎಕರೆ 'ಎ' ಕ್ಲಾಸ್ ಜಮೀನನ್ನು ಕಂಪನಿಗೆ ಉಳಿಸಿ, ಉಳಿದ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ಸಂಬಂಧ ಕಂಪನಿಯು ಹೈಕೋರ್ಟಿನಲ್ಲಿ ದಾವೆಯನ್ನು ಹೂಡಿದ್ದು (ರಿ.ನಂ. 25626 : 91) ಇದಕ್ಕೆ ಹೈಕೋರ್ಟ್‌ನಿಂದ ದಿ: 22-11-91ರಲ್ಲಿ ತಡೆಯಾಜ್ಞೆ ನೀಡಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳ ಬಗ್ಗೆ

3110 - ಶ್ರೀ ಚೆನ್ನಿಗಪ್ಪ. ಸಿ (ಕೊರಟಗೆರೆ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳಿವೆ? ಜಿಲ್ಲಾವಾರು ವಿವರ ನೀಡುವುದು?*
2. *ರಾಜ್ಯದಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ತೀರ್ಮಾನ ಸರ್ಕಾರದ ಪರಿಶೀಲನೆಯಲ್ಲಿದೆಯೇ? ಜಿಲ್ಲಾವಾರು ವಿವರ ನೀಡುವುದು?*
3. *ಹಾಗಿದ್ದಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳನ್ನು ಎಲ್ಲೆಲ್ಲಿ ತೆರೆಯಲಾಗುವುದು? ಜಿಲ್ಲಾವಾರು ವಿವರ ನೀಡುವುದು?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

1. 853- ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
2. ಇಲ್ಲ.
3. ಉದ್ಭವಿಸುವುದಿಲ್ಲ.